# || ಶ್ರೀಮದಾನನ್ದತೀರ್ಥಭಗವತ್ಪಾದಾಚಾರ್ಯಃ ||



Tracking:

| Sr | Date | Remarks | By |
|---|---|---|---|
| 1 | 11-10-2013 | **Typing started on** | **H K Srinivasa Rao** |
| 2 | | **Typing Ended on** | **H K Srinivasa Rao** |
| 3 | | **First Proof Reading** | **H K Srinivasa Rao & M S Venugopal** |
| 4 | | **Published** | **H K Srinivasa Rao** |
| | | | |




www.facebook.com/pages/Jagan-Mata-Mãe-do-Universo



Contents

# ಶ್ರೀ ದುರ್ಗಾಸುಳಾದಿ

## ರಾಗ ಭೈರವಿ ಧ್ರುವತಾಳ

ದುರ್ಗಾ ದುರ್ಗೆಯೆ ಮಹಾದುಷ್ಟಜನ ಸಂಹಾರೆ।
ದುರ್ಗಾಂತರ್ಗತಾ ದುರ್ಗೆ ದುರ್ಲಭೆ ಸುಲಭೆ।
ದುರ್ಗಮವಾಗಿದೆ ನಿನ್ನ ಮಹಿಮೆ ಬೊಮ್ಮ
ಭರ್ಗಾದಿಗಳಿಗೆಲ್ಲ ಗುಣಿಸಿದರೂ।
ಸ್ವರ್ಗ ಭೂಮಿ ಪಾತಾಳ ಸಮಸ್ತ ವ್ಯಾಪುತೇ ದೇವ।
ವರ್ಗಕ್ಕೆ ಮೀರಿದ ಬಲು ಸುಂದರೀ।
ದುರ್ಗುಣಾದವರ ಬಾಧೆ ಬಹಳವಾಗಿದೆ ತಾಯಿ।
ದುರ್ಗತಿಹಾರೆ ನಾನು ಪೇಳುವುದೇನು।
ದುರ್ಗಂಧವಾಗಿದೆ ಸಂಸೃತಿ ನೋಡಿದರೆ
ನಿರ್ಗಮನ ಕಾಣೆನಮ್ಮ ಮಂಗಳಾಂಗೆ।
ದುರ್ಗೆ ಹೇ ದುರ್ಗೆ ಮಹಾದುರ್ಗೆ ಭೂದುರ್ಗೆ ವಿಷ್ಣು।
ದುರ್ಗೆ ದುರ್ಜಯೆ ದುರ್ಧರ್ಷೆ ಶಕ್ತಿ।
ದುರ್ಗ ಕಾನನ ಗಹನ ಪರ್ವತ ಘೋರ ಸರ್ಪ।
ಗರ್ಗರ ಶಬ್ದ ವ್ಯಾಘ್ರ ಕರಡಿ ಮೃತ್ಯು।
ವರ್ಗ ಭೂತ ಪ್ರೇತ ಪೈಶಾಚ ಮೊದಲಾದ।
ದುರ್ಗಣ ಸಂಕಟ ಪ್ರಾಪ್ತವಾಗೆ।
ದುರ್ಗಾ ದುರ್ಗಾ ಎಂದು ಉಚ್ಚಸ್ವರದಿಂದ।
ನಿರ್ಗಳಿತನಾಗಿ ಒಮ್ಮೆ ಕೂಗಿದರೂ।
ಸ್ವರ್ಗಾಪವರ್ಗದಲ್ಲಿ ಹರಿಯೊಡನೆ ಯಿದ್ದರು।
ಸುರ್ಗಣ ಜಯ ಜಯವೆಂದು ಪೊಗಳುತ್ತಿರೆ।

ಕರ್ಗಳಿಂದಲಿ ಎತ್ತಿ ಸಾಕುವಾ ಸಾಕ್ಷಿ ಭೂತೆ।
ನೀರ್ಗುಡಿದಂತೆ ಲೋಕ ಲೀಲೆ ನಿನಗೆ।
ಸ್ವರ್ಗಂಗಾ ಜನಕ ನಮ್ಮ ವಿಜಯವಿಠ್ಠಲನಂಘ್ರಿ।
ದುರ್ಗಾಶ್ರಯ ಮಾಡಿ ಬದುಕುವಂತೆ ಮಾಡು॥1॥

## ಮಟ್ಟ ತಾಳ

ಅರಿದರಾಂಕುಶ ಶಕ್ತಿ ಪರಶು ನೇಗಿಲು ಖಡ್ಗ।
ಸರಸಿಜ ಗದೆ ಮುದ್ಗರ ಚಾಪ ಮಾರ್ಗಣ-
ವರ ಅಭಯ ಮುಸಲ ಪರಿ ಪರಿ ಆಯುಧವ।
ಧರಿಸಿ ಮೆರೆವ ಲಕುಮಿ ಸರಸಿಜ ಭವ ರುದ್ರ।
ಸರುವ ದೇವತೆಗಳ ಕರುಣಾಪಾಂಗದಲಿ।
ನಿರೀಕ್ಷಿಸ ಅವರವರ ಸ್ವರೂಪ ಸುಖವ ಕೊಡುವ।
ಸರಿ ಭೂಮಿ ದುರ್ಗೆ।
ಸರುವೋತ್ತಮ ನಮ್ಮ ವಿಜಯವಿಠ್ಠಲನಂಘ್ರಿ।
ಪರಮ ಭಕುತಿಯಿಂದ ಸ್ಮರಿಸುವ ಜಗಜ್ಜನನಿ॥2॥

## ತ್ರಿವಿಡಿತಾಳ

ಸ್ತುತಿ ಮಾಡುವೆ ನಿನ್ನ ಕಾಳಿ ಮಹಾಕಾಳಿ ಉ-|
ನ್ನತ ಬಾಹು ಕರಾಳ ವದನೆ ಚಂದಿರ ಮುಖೆ|
ಧೃತಿ ಶಾಂತಿ ಬಹುರೂಪೆ ರಾತ್ರಿ ರಾತ್ರಿ ಚರಣೆ।
ಸ್ಥಿತಿಯೆ ನಿದ್ರಾ ಭದ್ರೆ ಭಕ್ತ ವತ್ಸಲೆ ಭವ್ಯೆ।
ಚತುರಷ್ಟ ದ್ವಿ ಹಸ್ತೆ ಹಸ್ತಿ ಹಸ್ತಿಗಮನೆ ಅ-|
ದ್ಭುತ ಪ್ರಬಲೆ ಪ್ರವಾಸೆ ದುರ್ಗಾರಣ್ಯವಾಸೆ।

ಕ್ಷಿತಿಭಾರ ಹರಣೆ ಕ್ಷೀರಾಬ್ಧಿ ತನಯೆ ಸ-

ದ್ಗತಿ ಪ್ರಾದತೆ ಮಾಯೆ ಶ್ರಿಯೆ ಇಂದಿರೆ ರಮೆ।

ದಿತಿಜಾತ ನಿಗ್ರಹೆ ನಿರ್ಧೂತ ಕಲ್ಮಷೆ।

ಪ್ರತಿಕೂಲ ಭೇದೆ ಪೂರ್ಣಭೋದೆ ರೌದ್ರೆ।

ಅತಿಶಯ ರಕ್ತ ಜಿಹ್ವಾಲೋಲೆ ಮಾಣಿಕ್ಯ ಮಾಲೆ।

ಜಿತ ಕಾಮೆ ಜನನ ಮರಣ ರಹಿತೆ ಖ್ಯಾತೆ।

ಘೃತಪಾತ್ರ ಪರಮಾನ್ನ ತಾಂಬೂಲ ಹಸ್ತೆ ಸು-।

ವ್ರತೆ ಪತಿವ್ರತೆ ತ್ರಿನೇತ್ರೆ ರಕ್ತಾಮ್ಬರೆ।

ಶತಪತ್ರನಯನೆ ನಿರುತ ಕನ್ಯೆ ಉದಯಾರ್ಕ।

ಶತಕೋಟಿಸನ್ನಿಭೆ ಹರಿಯಾಂಕ ಸಂಸ್ಥೆ।

ಶ್ರುತಿ ತತಿನುತೆ ಶುಕ್ಲಶೋಣಿತ ರಹಿತೆ ಅ-

ಪ್ರತಿಹರತೆ ಸರ್ವದಾ ಸಂಚಾರಿಣಿ ಚತುರೆ।

ಚತುರ ಕಪರ್ದಿಯೆ ಅಂಭೃಣಿ ಹ್ರೀ।

ಉತ್ಪತ್ತಿ ಸ್ಥಿತಿ ಲಯ ಕರ್ತೆ ಶುಭ್ರ ಶೋಭನ ಮೂರ್ತೆ।

ಪತಿತ ಪಾವನೆ ಧನ್ಯೆ(ರನ್ನೆ) ಸರ್ವೌಷಧಿಯಲಿದ್ದು।

ಹತ ಮಾಡು ಕಾಡುವ ರೋಗಂಗಳಿಂದ।

ಕ್ಷಿತಿಯೊಳು ಸುಖದಲ್ಲಿ ಬಾಳುವ ಮತಿಯಿತ್ತು।

ಸತತ ಕಾಯಲಿಬೇಕು ದುರ್ಗೆ ದುರ್ಗೆ।

ಚ್ಯುತ ದೂರ ವಿಜಯವಿಠ್ಠಲರೇಯನ ಪ್ರೀಯೆ।

ಕೃತಾಂಜಲಿಯಿಂದ ತಲೆಬಾಗಿ ನಮಿಸುವೆ॥3॥

## ಅಟ್ಟತಾಳ

ಶ್ರೀಲಕ್ಷ್ಮೀ ಕಮಲಾ ಪದ್ಮಾ ಪದ್ಮಿನಿ ಕಮ-।

ಲಾಲಯೆ ರಮಾ ವೃಷಾಕಪಿ ಧನ್ಯಾ ವೃದ್ಧಿ ವಿ-।

ಶಾಲೆ ಯಜ್ಞಾ ಇಂದಿರೆ ಹಿರಣ್ಯ ಹರಿಣಿ।

ವಾಲಯ ಸತ್ಯಾ ನಿತ್ಯಾನಂದೆ ತ್ರಯಿ ಸುಧಾ ಸು।

ಶೀಲೆ ಸುಗನ್ಧಿ ಸುಂದರಿ ವಿದ್ಯಾ ಸುಶೀಲೇ ।

ಸುಲಕ್ಷಣಾ ದೇವಿ ನಾನಾ ರೂಪಗಳಿಂದ ಮೆರೆವ ಮೃತ್ಯುನಾಶೆ।

ಓಲಗ ಕೊಡು ಸಂತರ ಸನ್ನಿಧಿಯಲ್ಲಿ।

ಕಾಲ ಕಾಲಕೆ ಎನ್ನ ಭಾರ ವಹಿಸುವ ತಾಯಿ।

ಮೇಲು ಮೇಲು ನಿನ್ನ ಶಕ್ತಿ ಕೀರ್ತಿ ಬಲು।

ಕೇಳಿ ಕೇಳಿ ಬಂದೆ ಕೇವಲ ಈ ಮನ।

ಗಾಳಿಯಂತೆ ಪರ ದ್ರವ್ಯಕ್ಕೆ ಪೋಪುದು।

ಏಳಾಲ ಮಾಡದೆ ಉದ್ಧಾರ ಮಾಡುವುದು।

ಕೈಲಾಸಪುರದಲ್ಲಿ ಪೊಜೆಗೊಂಬ ದೇವಿ।

ಮೂಲ ಪ್ರಕೃತಿ ಸರ್ವ ವರ್ಣಾಬಿಮಾನಿನಿ।

ಪಾಲಸಾಗರ ಶಾಯಿ ವಿಜಯವಿಠ್ಠಲನೊಳು।

ಲೀಲೆ ಮಾಡುವ ನಾನಾಭರಣೆ ಭೂಷಣೆ ಪೂರ್ಣೆ ॥4॥

## ಆದಿತಾಳ

ಗೋಪಿನಂದನೆ ಮುಕ್ತೆ ದೈತ್ಯ ಸಂತತಿಗೆ ಸಂ-

ತಾಪವ ಕೊಡುತಿಪ್ಪ ಮಹಾ ಕಠೋರೆ ಉಗ್ರ।

ರೂಪೆ ವೈಲಕ್ಷಣೆ ಅಜ್ಞಾನಾಭಿಮಾನಿನಿ।

ತಾಪತ್ರಯ ವಿನಾಶೆ ಓಂಕಾರೆ ಹೂಂಕಾರೆ।

ಪಾಪಿ ಕಂಸಕೆ ಭಯ ತೋರದ ಬಾಲ ಲೀಲೆ।

ವ್ಯಾಪುತೆ ಧರ್ಮ ಮಾರ್ಗ ಪ್ರೇರಕೆ ಅಪ್ರಾಕೃತೆ।

ಸ್ವಪನದಲಿ (ಸ್ವಾಪದಲಿ) ನಿನ್ನ ನೆನೆಸಿದ ಶರಣನಿಗೆ।

ಅಪಾರವಾಗಿದ್ದ ವಾರಿಧಿಯಂತೆ ಮಹಾ।

ಆಪತ್ತು ಬಂದಿರಲು ಹಾರಿ ಪೋಗುವುದು ಸಪ್ತ।

ದ್ವೀಪನಾಯಿಕೆ ನರಕ ನಿರ್ಲೇಪೆ ತಮೋಗುಣದ।

ವ್ಯಾಪಾರ ಮಾಡಿಸಿ ಭಕ್ತ ಜನಕೆ ಪುಣ್ಯ।

ಸೋಪಾನ ಮಾಡಿಕೊಡುವ ಸೌಭಾಗ್ಯವಂತೆ ದುರ್ಗೆ।

ಪ್ರಾಪುತವಾಗಿ ಎನ್ನ ಮನದಲ್ಲಿ ನಿಂದು ದುಃಖ।

ಕೂಪಾರದಿಂದಲಿ ಎತ್ತಿ ಕಡೆಮಾಡು ಜನ್ಮಂಗಳ।

ಸೌಪರ್ಣಿ ಮಿಗಿಲಾದ ಸತಿಯರು ನಿತ್ಯ ನಿನ್ನ।

ಆಪಾದಮೌಳಿ ತನಕ ಭಜಿಸಿ ಧನ್ಯ(ಭವ್ಯ)ರಾದರು।

ನಾ ಪೇಳುವದೇನು ಪಾಂಡವರ ಮನೋಭೀಷ್ಟೇ

ಈ ಪಂಚ ಭೌತಿಕದಲಿ ಆವ ಸಾಧನ ಕಾಣೆ।

ಶ್ರೀಪತಿ ನಾಮ ಒಂದೇ ಜಿಹ್ವಾಗ್ರದಲಿ ನೆನೆವ।

ಔಪಾಸನ ಕೊಡು ರುದ್ರಾದಿಗಳ ವರದೇ।

ತಾಪಸ ಜನಪ್ರೀಯ ವಿಜಯವಿಠ್ಠಲ ಮೂರ್ತಿಯ।

ಶ್ರೀಪಾದರ್ಚನೆ ಮಾಳ್ಪ ಶ್ರೀ ಭೂ ದುರ್ಗಾ ವರಣತ್ರಯೆ(ವರ್ಣಾಶ್ರಯೆ)॥5॥

## ಜತೆ

ದುರ್ಗೆ ಹಾ ಹೆ ಹೊ ಹಾಃ ದುರ್ಗೆ ಮಂಗಳ ದುರ್ಗೆ।

ದುರ್ಗತಿ ಕೊಡದಿರು ನಮ್ಮ ವಿಜಯವಿಠ್ಠಲನ ಪ್ರೀಯೆ॥6॥